(ರೂ. ಕೋಟಿಗಳಲ್ಲಿ)

	೨೦೦೩-೦೪	೨೦೦೪-೦೫	೨೦೦೫-೦೬
ಲಾಟರಿ (ನಿವ್ವಳ)	೧೫೬.೩೫	೧೭೨.೯೦	೧೯೧.೦೮
ಸಾರಾಯಿ	೧೦೩೭.೩೮	೧೨೫೭.೫೬	೧೫೬೫.೪೩

ಇ) ನಷ್ಟವನ್ನು ಸರ್ಕಾರದ ವೆಚ್ಚವನ್ನು ಕಡಿತಗೊಳಿಸುವ ಮೂಲಕ ಮತ್ತು ಭಾಗಶಃ ನಷ್ಟವನ್ನು ಇತರೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರ ಮೂಲಕ ಭರಿಸಲಾಗುತ್ತದೆ. ಇದರ ಬಗ್ಗೆ ವಿವರವು ಈಗಾಗಲೇ ಸದನದಲ್ಲಿ ಮಂಡಸಲಾಗಿರುವ ೨೦೦೭-೦೮ನೇ ಸಾಲಿನ ವಾರ್ಷಿಕ ವಿತ್ತ ನಿರೂಪಣೆಯ ಭಾಗವಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೨೬ (೧೭೩೩)

ಸದಸ್ಯರ ಹೆಸರು : ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)

ಉತ್ತರಿಸುವವರು : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು

ಪ್ರಶ್ನೆ

ಅ) ಹುಬ್ಬಳ್ಳಿಯ ಎನ್.ಜಿ.ಇ.ಎಫ್ ಸಂಸ್ಥೆಯು ಕಳೆದ ೨ ವರ್ಷಗಳಲ್ಲಿ ಅಂದರೆ ೨೦೦೫-೦೬ ನೇ ಮತ್ತು ೨೦೦೬-೦೭ನೇ ಸಾಲುಗಳಲ್ಲಿ ಗಳಿಸಿದ ಆದಾಯ ಎಷ್ಟು ;

ಆ) ಈ ಸಂಸ್ಥೆಯು ಲಾಭದಲ್ಲಿ ನಡೆಯುತ್ತಿದೆಯೇ ಅಥವಾ ಹಾನಿಯಲ್ಲಿದೆಯೇ ಅಥವಾ ನಷ್ಟದಲ್ಲಿ ನಡೆಯುತ್ತಿದೆಯೇ ;

ಇ) ಹುಬ್ಬಳ್ಳಿ ಎನ್.ಜಿ.ಇ.ಎಫ್. ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು (ವರ್ಗವಾರು ವಿವರ ನೀಡುವುದು);

ಈ) ಈ ಸಂಸ್ಥೆಯಲ್ಲಿ ನೇಮಕಾತಿಯನ್ನು ಯಾವ ಆಧಾರದ ಮೇಲೆ ಮಾಡಿಕೊಳ್ಳಲಾಗುವುದು?

ಉತ್ತರ

ಅ) ೨೦೦೫–೦೬ನೇ ಸಾಲಿನಲ್ಲಿ ಗಳಿಸಿದ ಲಾಭ – ರೂ. ೫೪.೮೦ ಲಕ್ಷ.

೨೦೦೬–೦೭ ನೇ ಸಾಲಿನ ಆರ್ಥಿಕ ವರ್ಷ ೩೧.೦೩.೨೦೦೭ರಂದು ಮುಗಿಯುವುದರಿಂದ, ಆದಾಯದ ಮಾಹಿತಿ ಲಭ್ಯವಿರುವುದಿಲ್ಲ.

ಆ) ಈ ಸಂಸ್ಥೆ ಲಾಭದಲ್ಲಿ ನಡೆಯುತ್ತಿದೆ.

ಇ) ನೌಕರರ ಸಂಖ್ಯೆ ಈ ರೀತಿ ಇದೆ (ವರ್ಗವಾರು)

ಕಾರ್ಮಿಕ ವರ್ಗ	೧೨೪
ಮೇಲ್ವಿಚಾರಕ ಸಿಬ್ಬಂದಿ ವರ್ಗ	೨೮
ಅಧಿಕಾರಿಗಳ ವರ್ಗ	೦೪
ಒಟ್ಟು	೧೫೬

ಈ) ನೇಮಕಾತಿಯನ್ನು ಸರ್ಕಾರದ ನೇಮಕಾತಿ ನಿಯಮಾವಳಿಯನ್ವಯ ಮಾಡಿಕೊಳ್ಳುವುದು.